ಇಂದು ದಿಃ 28.11.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.ಪಿ ಎಂ ಆರ್ ವಕೀಲರಿಂದ 9 ನೇ ಪ್ರತಿವಾದಿಗಳ ಪರವಾಗಿ.**

ದಾವಾದ ಆಸ್ತಿಗಳಿಗೆ ಸಂಬಂಧಪಟ್ಟ ಉತಾರಗಳಲ್ಲಿ ನನ್ನ ಹೆಸರು ಹೇಗೆ ಬಂದಿತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುವುದು ಸರಿಯಲ್ಲ. ನನ್ನ ತಂದೆಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಅರ್ಜಿ ಕೊಟ್ಟು ನನ್ನ ಹೆಸರನ್ನು ದಾಖಲಿಸಿದರು ಎಂದು ಹೇಳುವುದು ಸರಿಯಲ್ಲ. ಯಾವ ಆಧಾರದಲ್ಲಿ ನನ್ನ ಹೆಸರನ್ನು ದಾವಾ ಸ್ವತ್ತಿನ ದಾಖಲೆಗಳಲ್ಲಿ ದಾಖಲು ಮಾಡಲಾಗಿದೆ ಎಂಬುದರ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಎಂದು ಹೇಳುವುದು ಸರಿಯಲ್ಲ. ಮಾಧವರಾವರವರಿಗೆ ಮಾತ್ರ ಒಟ್ಟು ಕುಟುಂಬ ಇದ್ದು , ಮಾಧವರಾವ ಮತ್ತು ಶಂಕರರಾವರವರ ಮಧ್ಯ ಒಟ್ಟು ಕುಟುಂಬ ಇರಲಿಲ್ಲ ಎಂದು ಹೇಳುವುದು ಸರಿಯಲ್ಲ. 9 ನೇ ಪ್ರತಿವಾದಿಯು ಬ್ಯಾಂಕುಗಳಲ್ಲಿ ಹಣವನ್ನು ಠೇವಣಿ ಇಟ್ಟಿದ್ದಾರೆ ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು , ಅದು ತನ್ನ ಗಮನಕ್ಕೆ ಇಲ್ಲ ಎಂದು ಉತ್ತರಿಸಿದ್ದಾರೆ. 41, 42 , 43 , 53 ಮತ್ತು 54 ನೇ ಪ್ರತಿವಾದಿಗಳು ತಮ್ಮ ಪ್ರತಿವಾದಪತ್ರದಲ್ಲಿ ಏನೆಲ್ಲ ಹೇಳಿದ್ದಾರೆ ಎಂಬುದರ ಬಗ್ಗೆ ನನಗೆ

ಗೊತ್ತಿಲ್ಲ. ಮಾಧವರಾವ ಮತ್ತು ಶಂಕರರಾವರವರು ಸೇರಿ ಮಾಡಿದ ವ್ಯವಹಾರದಿಂದ ಬಂದ ಲಾಭದಲ್ಲಿ ದಾವಾ ಸ್ವತ್ತುಗಳನ್ನು ಗಳಿಕೆ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 1/11 ನೇ ಹಿಸ್ಸೆ ಇದೆ ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿದ್ದೆನೆಯೋ ಇಲ್ಲವೋ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಯಾವುದೇ ದಾಖಲೆ ಇಲ್ಲದ ಕಾರಣ ಅದನ್ನು ಹಾಜರ ಪಡಿಸಿಲ್ಲ ಎಂದು ಹೇಳುವುದು ಸರಿಯಲ್ಲ. ಜನರಲ್ ಪಾವರ್ ಆಫ್ ಅಟಾರ್ನಿಯನ್ನು 13 ನೇ ಪ್ರತಿವಾದಿಯ ಹೆಸರಲ್ಲಿ ಮಾತ್ರ ಕೊಟ್ಟದ್ದು ಎಂದು ಹೇಳುವುದು ಸರಿಯಲ್ಲ. ದಾವಾ ಅನೆಕ್ಸರ್ ಬಿ ಮತ್ತು ಸಿ ಆಸ್ತಿಗಳ ಮೇಲೆ ಮಾಧವರಾವರವರ ವಾರಸುದಾರರಿಗೆ ಮಾತ್ರ ಹಕ್ಕು ಇದೆ , ಅವುಗಳ ಮೇಲೆ ನನಗೆ, 13, 14 ಮತ್ತು 18 ನೇ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದು ಹೇಳುವುದು ಸರಿಯಲ್ಲ . ದಾವಾ ಅನೆಕ್ಸರ್ ಡಿ ನಲ್ಲಿ ಕಾಣಿಸಿರುವ ಸ್ವತ್ತನ್ನು 13 ನೇ ಪ್ರತಿವಾದಿ ಮಾತ್ರ ಕೊಡಲು ಬಾಧ್ಯರಿದ್ದಾರೆ ಎಂದು ಹೇಳುವುದು ಸರಿಯಲ್ಲ . ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಉತಾರಗಳಲ್ಲಿ ನನ್ನ ಹೆಸರು ದಾಖಲಾಗಿದೆ ಎಂಬುದನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದು ಹೇಳುವುದು ಸರಿಯಲ್ಲ . ಬಾಡಿಗೆದಾರರಿಂದ ಡೆಪಾಸಿಟ್ ಹಣವನ್ನು 13 ನೇ ಪ್ರತಿವಾದಿ ಮಾತ್ರ ತೆಗೆದುಕೊಂಡಿದ್ದಾರೆ, 9 ನೇ ಪ್ರತಿವಾದಿ ತೆಗೆದುಕೊಂಡಿಲ್ಲ ಎಂದು ಹೇಳುವುದು ಸರಿಯಲ್ಲ . ಸದರಿ ಹಣವನ್ನು 9 ನೇ ಪ್ರತಿವಾದಿ ಸಹ ತೆಗೆದುಕೊಂಡಿದ್ದಾರೆ ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ಕೇಳಲು ನಾನು ಅರ್ಹನಿರುವುದಿಲ್ಲ , ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದು ಎಂದು ಹೇಳುವುದು ಸರಿಯಲ್ಲ.

ಪಿಡಬ್ಲ್ಯು. 1

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ,

ಧಾರವಾಡ.